

ಕಲಬುರ್ಗಿಯ ಧಾರ್ಮಿಕ ಪ್ರಭೆಯಂತಿರುವ ಶರಣಬಸವೇಶ್ವರ ಮಂದಿರದಲ್ಲಿ ಶರಣಬಸವೇಶ್ವರರ ಸಮಾಧಿಯಿದೆ. ಬಸವಣ್ಣನ ದಾಸೋಹತತ್ವ ಅನುಷ್ಠಾನಗೊಂಡಿರುವ ಇಲ್ಲಿ, ಅನ್ನದಾಸೋಹದೊಂದಿಗೆ ಜ್ಞಾನದಾಸೋಹವೂ ನಿರಂತರವಾಗಿ ನಡೆಯುತ್ತದೆ.





ಕನ್ನಡದ ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಹೆಸರು ಕಲಬುರ್ಗಿ. ಕಲಬುರಗಿ, ಗುಲ್ಬರ್ಗ, ಗುಲಬರ್ಗಾ ಎಂದೂ ಜನಬಳಕೆಯಲ್ಲಿ ಕರೆಸಿಕೊಳ್ಳುವ ಈ ಊರಿನ ಪ್ರಸ್ತಾಪವಾದ ಕೂಡಲೇ ಅನೇಕರ ಮನಸ್ಸಿನಲ್ಲಿ ಬಿಸಿಲು–ಬೆವರಿನ ಚಿತ್ರಗಳು ಮೂಡುತ್ತವೆ. ಆದರೆ, ಒಳಹೊಕ್ಕು ನೋಡಿದರೆ ಕಲಬುರ್ಗಿಯಷ್ಟು ಸಾಂಸ್ಕೃತಿಕ ಶ್ರೀಮಂತಿಕೆಯುಳ್ಳ, ಬಹುತ್ವದ ಚಹರೆಗಳುಳ್ಳ ಮತ್ತೊಂದು ಜೀವಂತ ಊರು ನಾಡಿನಲ್ಲಿ ಸಿಗುವುದಿಲ್ಲ. ಇಂಥ ವಿಶಿಷ್ಟ ಊರಿನಲ್ಲೀಗ ಕನ್ನಡದ ತೇರು. ‘ತೇರು ಹೊಂಟೈತವ್ವ ತಂಗಿ ತೇರು ಹೊಂಟೈತೆ’ ಎಂದು ಸಹೃದಯರು ಕಣ್ಣರಳಿಸುವ ಸಮಯವಿದು. ಫೆಬ್ರುವರಿ 5ರಿಂದ 7ರವರೆಗೆ ಕಲಬುರಗಿಯಲ್ಲಿ ಅಖಿಲಭಾರತ 85ನೇ ಕನ್ನಡ ಸಾಹಿತ್ಯ ಸಮ್ಮೇಳನ.

ಸಮ್ಮೇಳನದ ಹೆಸರಿನಲ್ಲಿ ಸಾಹಿತ್ಯವಿದ್ದರೂ, ಇದು ನಿಜ ಅರ್ಥದಲ್ಲಿ ಕನ್ನಡದ ಜಾತ್ರೆಯೇ. ಕನ್ನಡದ ವಿವಿಧ ಆಯಾಮಗಳು ಅನಾವರಣಗೊಳ್ಳುವ, ಅನುಸಂಧಾನಗೊಳ್ಳುವ ಈ ಜಾತ್ರೆಯಲ್ಲಿ ಲಕ್ಷಾಂತರ ಕನ್ನಡಿಗರು ಭಾಗವಹಿಸುತ್ತಾರೆ.

ಜಾತ್ರೆ ನೋಡಬಂದವರು ತೇರನ್ನಷ್ಟೇ ನೋಡಿ ಸುಮ್ಮನಾಗುವುದಿಲ್ಲ; ರಥಬೀದಿಯ ಸುತ್ತಮುತ್ತಲಿನ ಊರನ್ನೂ ನೋಡುತ್ತಾರೆ. ಈ ಹಿನ್ನೆಲೆಯಲ್ಲಿ ಸಮ್ಮೇಳನದ ನೆಪದಲ್ಲಿ